ದಿನಾಂಕ 25.09.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ. ಕೆ.ಕೆ.ಎನ್. – 1 ಮತ್ತು 2 ನೇ ಎದುರುದಾರರ ಪರ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಮತ್ತು ಎದುರುದಾರರು ಸಲ್ಲಿಸಿರುವ ತಕರಾರುಗಳ ವಿಷಯಗಳು ನನಗೆ ಗೊತ್ತಿವೆ. 1 ನೇ ಎದುರುದಾರನಿಗೆ ಅಪಘಾತದ ವೇಳೆಗೆ ದ್ವಿಚಕ್ರ ವಾಹನಗಳನ್ನು ಚಲಾಯಿಸುವ ಪರವಾನಗಿ ಮತ್ತು ಅಪಘಾತದಲ್ಲಿ ಭಾಗಿಯಾಗಿದ್ದ ಮೋಟಾರ್ ಸೈಕಲ್ ಸಂಖ್ಯೆ ಕೆಎ-10/ಇಸಿ-6935 ಕ್ಕೆ ವಿಮೆ ಇತ್ತು ಎಂದರೆ ಸರಿ. ಹಾಗಾಗಿ, ನನಗೆ ಪರಿಹಾರವನ್ನು ಕೊಡಲು 3 ನೇ ಎದುರುದಾರ ಹೊಣೆಗಾರಿಕೆಯನ್ನು ಹೊಂದಿದ್ದಾರೆ ಎಂದರೆ ಸರಿ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದು, 1 ಮತ್ತು 2 ನೇ ಎದುರುದಾರರ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು : ಶ್ರೀ. ಬಿ.ಜಿ.ಕೆ.– 3 ನೇ ಎದುರುದಾರರ ಪರ ವಕೀಲರಿಂದಃ

ಈ ಮೇಲೆ ಹೇಳಿದ ಮೋಟಾರ್ ಸೈಕಲ್‌ನ ವಿಮಾ ಪಾಲಿಸಿಯನ್ನು ಮತ್ತು 1 ನೇ ಎದುರುದಾರನ ಚಾಲನಾ ಪರವಾನಗಿಯನ್ನು ನಾನು ನೋಡಿಲ್ಲ. ಅಪಘಾತದ ದಿನ ನಾನು, ತಮ್ಮಡಿಗೌಡ ಮತ್ತು ಸಿದ್ದರಾಜು ಎನ್ನುವವರು ರಸ್ತೆಯ ಎಡಬದಿಯಲ್ಲಿ ನಿಂತಿದ್ದೇವು. ಸದರಿ ಸಿದ್ದರಾಜುರವರಿಗೆ ಅಪಘಾತವಾಗಿಲ್ಲ. ಅವರು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ್ದಾರೆ ಎಂದರೆ ಸರಿ. ಅವರು ಪೊಲೀಸರಿಗೆ

ದೂರನ್ನು ನೀಡಿದ್ದಾರೆ ಎಂದರೆ ಸರಿ. ಆ ದೂರಿನ ಪ್ರಕಾರ ಕಿರಣ್ ಕುಮಾರ್ ಎನ್ನುವವರು ನನಗೆ ಅಪಘಾತ ಮಾಡಿದ್ದಾರೆ ಎಂದರೆ ಸರಿ. ಅವರನ್ನು ಮತ್ತು ಈ ಮೇಲೆ ಹೇಳಿದ ಮೋಟಾರ್ ಸೈಕಲ್‌ನ್ನು ಸದರಿ ಸಿದ್ದರಾಜುರವರು ಗುರುತಿಸಿ ದೂರು ನೀಡಿದ್ದಾರೆ ಎಂದರೆ ಸರಿ.

ಅಪಘಾತವಾದ ನಂತರ ನಾನು ತಿ. ನರಸೀಪುರದ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ಮೂರು ದಿನಗಳವರೆಗೆ ಒಳರೋಗಿಯಾಗಿದ್ದೆ. ಆ ಕುರಿತು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆ ಮೂರು ದಿನಗಳ ನಂತರ ಮೈಸೂರಿನ ನಾಗರಾಜೇಗೌಡ ಮೆಮೋರಿಯಲ್ ಆಸ್ಪತ್ರೆಗೆ ಹೋಗಿದ್ದೇನೆ. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ 17 ದಿನಗಳ ನಂತರ ನಾನು ಸದರಿ ಆಸ್ಪತ್ರೆಗೆ ಹೋಗಿದ್ದೆ ಎಂದರೆ ಸರಿ. ನನಗೆ ಅಪಘಾತದಲ್ಲಿ ಸಾಧಾ ಸ್ವರೂಪದ ಗಾಯಗಳಾಗಿದ್ದು, ನಾನು ಕಡೆ ಗಾಯ ಮಾಡಿಕೊಂಡು ಅಪಘಾತವಾದ 17 ದಿನಗಳ ನಂತರ ಸದರಿ ಆಸ್ಪತ್ರಗೆ ಹೋಗಿದ್ದೆ ಎಂದರೆ ಸರಿಯಲ್ಲ. ಆ 17 ದಿನಗಳ ಒಳಗೆ ಬೇರೆ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಈ ಮೇಲೆ ಹೇಳಿದ ಸರ್ಕಾರಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು, ನನಗೆ ನೋವು ಹೆಚ್ಚಾಗಿದ್ದರಿಂದ ಸದರಿ ಮೆಮೋರಿಯಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಆ ಆಸ್ಪತ್ರೆಯಲ್ಲಿ ಪಡೆದಿರುವ ಚಿಕಿತ್ಸೆಗೆ ಮತ್ತು ಅಪಘಾತದಲ್ಲಿ ಆಗಿರುವ ಗಾಯಕ್ಕೆ ಸಂಬಂಧವಿರದ ಕಾರಣ ಆ ಆಸ್ಪತ್ರೆಯ ವೈದ್ಯಕೀಯ ಬಿಲ್ಲುಗಳ ಮರುಪಾವತಿ ಹಣವನ್ನು 3 ನೇ ಎದುರುದಾರ

ನನಗೆ ಕೊಡಲು ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ.

ಅಪಘಾತ ಪಡಿಸಿದ ವ್ಯಕ್ತಿಯ ಹೆಸರು ರವಿಕಿರಣ್. ಅಪಘಾತವನ್ನು ಅವರು ಮಾಡಿದ್ದರು ಎಂದು ಅವರೇ ನನಗೆ ಹೇಳಿದ್ದರು. ನನಗೆ ಅಪಘಾತ ಮಾಡಿದ್ದ ವ್ಯಕ್ತಿ ಬೇರೆಯಾಗಿದ್ದರೂ ಕೂಡ ಚಾಲನಾ ಪರವಾನಗಿ ಇದ್ದ ರವಿಕುಮಾರ್ ಎನ್ನುವವರನ್ನು ಈ ಪ್ರಕರಣದಲ್ಲಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಪರಿಹಾರ ಪಡೆಯಲು ಸದರಿ ರವಿಕುಮಾರ್ ರವರು ನನಗೆ ಸಹಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ನಾನು ಅಪಘಾತಕ್ಕೆ ಪೂರ್ವದಲ್ಲಿ ಬೆಂಗಳೂರಿನ ಆರ್.ಎಂ.ಸಿ.ಯಲ್ಲಿ ಮೂಟೆಗಳನ್ನು ಹೊರುವ ಕೆಲಸ ಮಾಡುತ್ತಿದ್ದೆ. ಈಗ ನಾನು ಮನೆಯಲ್ಲಿದ್ದೇನೆ.

ನಾನು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಎರಡು ಮೂರು ಬಾರಿ ಸರಿ ಮೆಮೋರಿಯಲ್ ಆಸ್ಪತ್ರೆಗೆ ಹೋಗಿದ್ದೆ. ನನಗೆ ಶಸ್ತ್ರಚಿಕಿತ್ಸೆಯಾಗಿಲ್ಲ, ಗಾಯವಾಗಿದ್ದ ಜಾಗಕ್ಕೆ ಬ್ಯಾಂಡೇಜ್ ಹಾಕಲಾಗಿದೆ ಎಂದರೆ ಸರಿ. ಪರಿಹಾರ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, 1 ಮತ್ತು 2 ನೇ ಎದುರುದಾರರು ಸುಳ್ಳು ಪ್ರಕರಣ ದಾಖಲಿಸಿರುವ ಕಾರಣ ಪರಿಹಾರ ನೀಡಲು 3 ನೇ ಎದುರುದಾರರು ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ.

ನಿಪಿ.8 ರ ಆಧಾರ್ ಕಾರ್ಡ್‌ನಲ್ಲಿರುವ ನನ್ನ ಜನ್ಮ ವರ್ಷ ಸರಿಯಿದೆ. ನನಗೆ

ತಿಂಗಳಿಗೆ ರೂ.25-30 ಸಾವಿರ ಸಂಪಾದನೆ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ತಿ.ನರಸೀಪುರ.